## ಕರ್ನಾಟಕ ವಿಧಾನ ಪರಿಷತ್ತು

1. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮ ನಿರ್ದೇಶನ ಹೊಂದಿದವರು)

2. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 384 (526)

3. ಉತ್ತರಿಸಬೇಕಾದ ದಿನಾಂಕ : 22-12-2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದೂರು ಹೋಬಳಿ, ಬಿಸ್ಕೂರು ಗ್ರಾಮದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕಾಡರಾಮನಹಳ್ಳಿ ಸರ್ವೆ ನಂ.24 ರಲ್ಲಿ ಸರ್ಕಾರಿ ಕೆರೆಯ ಏರಿಯನ್ನು ಒಡೆದು ಭೂ ಕಬಳಿಕೆ ಮಾಡಿಕೊಂಡು ಒತ್ತುವರಿ ಮಾಡಿಕೊಂಡು ನರೇಗಾ ಯೋಜನೆಯಡಿ ರಸ್ತೆ ನಿರ್ಮಾಣ ಕಾಮಗಾರಿ ನಿರ್ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಿಸ್ಕೂರು ಗ್ರಾಮ ಪಂಚಾಯತಿಯ ಕಾಡುರಾಮನಹಳ್ಳಿ ಗ್ರಾಮದ ಸರ್ಕಾರಿ ಕೆರೆಯನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಸದರಿ ಕೆರೆ ಜಾಗದಲ್ಲಿ ತಿಪ್ಪಸಂದ್ರ ಮುಖ್ಯ ರಸ್ತೆಯಿಂದ ಕಾಡುರಾಮನಹಳ್ಳಿ ಗ್ರಾಮಕ್ಕೆ ಪಿ.ಡಬ್ಲ್ಯೂ.ಡಿ ಇಲಾಖೆಯ ರಸ್ತೆ ಹಾಗೂ ಪ್ರಸ್ತುತ ಬಿಸ್ಕೂರು ಗ್ರಾಮ ಪಂಚಾಯತಿಯ ಘನ ತ್ಯಾಜ್ಯ ವಿಲೇವಾರಿ ಘಟಕ (ಹಿಂದಿನ ರೇಷ್ಮೆ ಇಲಾಖೆಯ ಚಾಕಿ ಸೆಂಟರ್) ಇರುವುದು. ಸದರಿ ಕೆರೆಯ ಏರಿಯ ಮೇಲೆ ಹಿಂದಿನಿಂದಲು ಇದ್ದಂತಹ ದನಕರುಗಳು ಓಡಾಡುವ ಮಾರ್ಗದಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ಗ್ರಾಮಸಭೆಯ ನಿರ್ಣಯದಂತೆ 2022-23ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. |
| (ಆ) | ಹಾಗಿದ್ದಲ್ಲಿ, ಒಟ್ಟು ವಿಸ್ತೀರ್ಣದ ಜಾಗವನ್ನು, ಯಾರು ಒತ್ತುವರಿ ಮಾಡಿಕೊಂಡಿರುತ್ತಾರೆ; ಒಟ್ಟು ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ; (ಪೂರ್ಣ ವಿವರ ಒದಗಿಸುವುದು) | ಸರ್ಕಾರಿ ಕೆರೆ ಒತ್ತುವರಿ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗೆ ತಕರಾರು ಅರ್ಜಿ ಬಂದಿದ್ದು, ಸದರಿ ಅರ್ಜಿಯನ್ನು ಮಾನ್ಯ ತಹಶೀಲ್ದಾರರಿಗೆ ರವಾನಿಸಲಾಗಿದೆ. ತಹಶೀಲ್ದಾರರು, ರಾಜಸ್ವ ನಿರೀಕ್ಷಕರು ಕುದೂರು ಹೋಬಳಿ/ತಾಲ್ಲೂಕು ಮೋಜಿಣಿದಾರರು ಮಾಗಡಿ ರವರಿಗೆ ಕೆರೆ ಅಳತೆ ಮಾಡಿ ವರದಿ ಸಲ್ಲಿಸಲು ಸೂಚಿಸಿದ್ದು, ವರದಿಯನ್ನು ಗ್ರಾಮ ಪಂಚಾಯತಿಗೆ ನೀಡಿದ ನಂತರ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದು. ಪ್ರಸ್ತುತ ಕಾಮಗಾರಿಗೆ ಸಂಬಂಧಿಸಿದಂತೆ ತಕರಾರು ಅರ್ಜಿ ಬಂದಿರುವುದರಿಂದ ತಾತ್ಕಾಲಿಕವಾಗಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಂದಾಜು ರೂ.50985/-ಗಳನ್ನು ವೆಚ್ಚ ಮಾಡಲಾಗಿದೆ. |
| (ಇ) | ಒತ್ತುವರಿ ಮಾಡಿಕೊಂಡ ಖಾಸಗಿ ವ್ಯಕ್ತಿಗಳ ವಿರುದ್ಧ ಹಾಗೂ ಇದರಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಇದುವರೆವಿಗೆ ಕೈಗೊಂಡ ಕ್ರಮಗಳೇನು; | ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ರಾಜಸ್ವ ನಿರೀಕ್ಷಕರು, ಕುದೂರು ಹೋಬಳಿ/ತಾಲ್ಲೂಕು ಮೋಜಿಣಿದಾರರು ಮಾಗಡಿ ತಾಲ್ಲೂಕು ರವರಿಗೆ ವರದಿ ನೀಡುವಂತೆ ತಹಶೀಲ್ದಾರರು ಸೂಚಿಸಿದ್ದು, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. |

| | | |
|---|---|---|
| (ಈ) | ಯಾವ ಕಾಲಮಿತಿಯಲ್ಲಿ ಒತ್ತುವರಿಯನ್ನು ತೆರವುಗೊಳಿಸಲಾಗುವುದು; | ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ರಾಜಸ್ವ ನಿರೀಕ್ಷಕರು, ಕುದೂರು ಹೋಬಳಿ/ತಾಲ್ಲೂಕು ಮೋಜಿಣಿದಾರರು ಮಾಗಡಿ ತಾಲ್ಲೂಕು ರವರಿಗೆ ವರದಿ ನೀಡುವಂತೆ ತಹಶೀಲ್ದಾರರು ಸೂಚಿಸಿದ್ದು, ವರದಿ ಬಂದ ಕೂಡಲೇ ಒತ್ತುವರಿಯನ್ನು ತೆರವುಗೊಳಿಸಲಾಗುವುದು. |
| (ಉ) | ಸದರಿ ಪಂಚಾಯತಿಯಲ್ಲಿ ದಿನಾಂಕ:31-11-2007ರ ಮುಂಚಿತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡಲಾಗುತ್ತಿದೆಯೇ; ಇಲ್ಲಿಯವರೆವಿಗೂ ಎಷ್ಟು ತಿಂಗಳ ವೇತನ ಬಾಕಿ ಇದೆ; ಬಾಕಿ ಉಳಿದು ಕೊಂಡಿರುವ ಕಾರಣವೇನು? | 1) ದಿನಾಂಕ:31-11-2017 ರ ಮುಂಚಿತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ಸರ್ಕಾರದ ಆದೇಶದಂತೆ ಕನಿಷ್ಠ ವೇತನ ಪಾವತಿಸಲಾಗುತ್ತಿದೆ.<br>2) ಬಾಕಿ ಇರುವ ವೇತನ ವಿವರ ಲಗತ್ತಿಸಿದೆ.<br>3) ಸ್ವಂತ ಸಂಪನ್ಮೂಲ ಸಂಗ್ರಹಿಸಿ ವಿತರಿಸಲಾಗುವುದು. |

ಸಂಖ್ಯೆ: ಆರ್‌ಡಿಸಿ-ಇಜಿಎಸ್/ 960/2022 (E-965220)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಕರ್ನಾಟಕ ಸರ್ಕಾರ

**ರಾಮನಗರ ಜಿಲ್ಲಾ ಪಂಚಾಯತ್**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಪಂಚಾಯತ್ ಭವನ, ಬಿ.ಎಂ.ರಸ್ತೆ, ರಾಮನಗರ-562159.

ಸಂಖ್ಯೆ: ರಾಜಿಪಂ/ಸಿ9/ಎಲ್.ಸಿ.ಕ್ಯೂ/146ನೇಅ/2021-22. ದಿನಾಂಕ:14.12.2022.

**ರವರಿಗೆ,**
ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-01.

**ಮಾನ್ಯರೆ,**

**ವಿಷಯ:-** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು) ರವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:384(526)ಕ್ಕೆ ಉತ್ತರ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ/948(2)ಉಖಾಯೋ/2022 ದಿ:09.12.2022.

*****0*****

ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು) ರವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:384(526)ಕ್ಕೆ ರಾಮನಗರ ಜಿಲ್ಲೆಗೆ ಸಂಬಂಧಿಸಿದ ಉತ್ತರವನ್ನು ಸಿದ್ಧಪಡಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಮನಗರ ಜಿಲ್ಲೆ, ಮಾಗಡಿ ತಾ. ಕುದೂರು ಹೋ. ಬಿಸ್ಕೂರು ಗ್ರಾಮದ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಕಾಡರಾಮನಹಳ್ಳಿ ಸರ್ವೆ ನಂ.24ರಲ್ಲಿ ಸರ್ಕಾರಿ ಕೆರೆಯ ಏರಿಯನ್ನು ಒಡೆದು ಭೂ ಕಬಳಿಕೆ ಮಾಡಿಕೊಂಡು ಒತ್ತುವರಿ ಮಾಡಿಕೊಂಡು ನರೇಗಾ ಯೋಜನೆಯಡಿ ರಸ್ತೆ ನಿರ್ಮಾಣ ಕಾಮಗಾರಿ ನಿರ್ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಿಸ್ಕೂರು ಗ್ರಾಮ ಪಂಚಾಯಿತಿಯ ಕಾಡುರಾಮನಹಳ್ಳಿ ಗ್ರಾಮದ ಸರ್ಕಾರಿ ಕೆರೆಯನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಸದರಿ ಕೆರೆ ಜಾಗದಲ್ಲಿ ತಿಪ್ಪಸಂದ್ರ ಮುಖ್ಯ ರಸ್ತೆಯಿಂದ ಕಾಡುರಾಮನಹಳ್ಳಿ ಗ್ರಾಮಕ್ಕೆ ಪಿ.ಡಬ್ಲ್ಯೂ.ಡಿ. ಇಲಾಖೆಯ ರಸ್ತೆ ಹಾಗೂ ಪ್ರಸ್ತುತ ಬಿಸ್ಕೂರು ಗ್ರಾಮ ಪಂಚಾಯಿತಿಯ ಘನ ತ್ಯಾಜ್ಯ ವಿಲೇವಾರಿ ಘಟಕ (ಹಿಂದಿನ ರೇಷ್ಮೆ ಇಲಾಖೆಯ ಚಾಕಿ ಸೆಂಟರ್) ಇರುವುದು. ಸದರಿ ಕೆರೆಯ ಏರಿಯ ಮೇಲೆ ಹಿಂದಿನಿಂದಲು ಇದ್ದಂತಹ ದನಕರುಗಳು ಓಡಾಡುವ ಮಾರ್ಗದಲ್ಲಿ ರೈತರಿಗೆ ಅನುಕೂಲ ಮಾಡಿಕೊಡಲು ನರೇಗಾ ಯೋಜನೆಯಡಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. |
| ಆ) | ಹಾಗಿದ್ದಲ್ಲಿ ಒಟ್ಟು ವಿಸ್ತೀರ್ಣದ ಜಾಗವನ್ನು ಯಾರು ಒತ್ತುವರಿ ಮಾಡಿಕೊಂಡಿರುತ್ತಾರೆ; ಒಟ್ಟು ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ; (ಪೂರ್ಣ ವಿವರ ಒದಗಿಸುವುದು) | ಸರ್ಕಾರಿ ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗೆ ತಕರಾರು ಅರ್ಜಿ ಬಂದಿದ್ದು, ಸದರಿ ಅರ್ಜಿಯನ್ನು ಮಾನ್ಯ ತಹಶೀಲ್ದಾರರಿಗೆ ರವಾನಿಸಲಾಗಿದೆ. ತಹಶೀಲ್ದಾರರು, ರಾಜಸ್ವ ನಿರೀಕ್ಷಕರು ಕುದೂರು ಹೋಬಳಿ/ ತಾಲ್ಲೂಕು ಮೋಜಿಣಿದಾರರು ಮಾಗಡಿ ರವರಿಗೆ ಕೆರೆ ಅಳತೆ ಮಾಡಿ ವರದಿ ಸಲ್ಲಿಸಲು ಸೂಚಿಸಿದ್ದು, ವರದಿಯನ್ನು ಗ್ರಾಮ ಪಂಚಾಯಿತಿಗೆ ನೀಡಿದ ನಂತರ ಒತ್ತುವರಿಯನ್ನು ತೆರವುಗೊಳಿಸಲು ಕ್ರಮ ವಹಿಸಲಾಗುವುದು. ಪ್ರಸ್ತುತ ಕಾಮಗಾರಿಗೆ ಸಂಬಂಧಿಸಿದಂತೆ ತಕರಾರು ಅರ್ಜಿ ಬಂದಿರುವುದರಿಂದ ತಾತ್ಕಾಲಿಕವಾಗಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿದೆ. ಸದರಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಂದಾಜು ರೂ.50,985/-ಗಳನ್ನು ವೆಚ್ಚ ಮಾಡಲಾಗಿದೆ. |

...2

| | | |
|---|---|---|
| ಇ) | ಒತ್ತುವರಿ ಮಾಡಿಕೊಂಡ ಖಾಸಗಿ ವ್ಯಕ್ತಿಯ ವಿರುದ್ಧ ಹಾಗೂ ಇದ್ದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಇದುವರೆವಿಗೆ ಕೈಗೊಂಡ ಕ್ರಮಗಳೇನು; | ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ರಾಜಸ್ವ ನಿರೀಕ್ಷಕರು ಕುದೂರು ಹೋಬಳಿ/ತಾಲ್ಲೂಕು ಮೋಜಿಣಿದಾರರು ಮಾಗಡಿ ತಾಲ್ಲೂಕು ರವರಿಗೆ ವರದಿ ನೀಡುವಂತೆ ತಹಶೀಲ್ದಾರರು ಸೂಚಿಸಿದ್ದು, ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. |
| ಈ) | ಯಾವ ಕಾಲಮಿತಿಯಲ್ಲಿ ಒತ್ತುವರಿಯನ್ನು ತೆರವುಗೊಳಿಸಲಾಗುವುದು; | ಕೆರೆ ಒತ್ತುವರಿಗೆ ಸಂಬಂಧಿಸಿದಂತೆ ರಾಜಸ್ವನಿರೀಕ್ಷಕರು, ಕುದೂರು ಹೋಬಳಿ/ತಾಲ್ಲೂಕು ಮೋಜಿಣಿದಾರರು ಮಾಗಡಿ ತಾಲ್ಲೂಕು ರವರಿಗೆ ವರದಿ ನೀಡುವಂತೆ ತಹಶೀಲ್ದಾರರು ಸೂಚಿಸಿದ್ದು, ವರದಿ ಬಂದ ಕೂಡಲೇ ಒತ್ತುವರಿಯನ್ನು ತೆರವುಗೊಳಿಸಲಾಗುವುದು. |
| ಉ) | ಸದರಿ ಪಂಚಾಯಿತಿಯಲ್ಲಿ ದಿನಾಂಕ:31 11.2017ರ ಮುಂಚಿತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡಲಾಗುತ್ತಿದೆಯೇ; ಇಲ್ಲಿಯವರೆವಿಗೂ ಎಷ್ಟು ತಿಂಗಳ ವೇತನ ಬಾಕಿ ಇದೆ; ಬಾಕಿ ಉಳಿದುಕೊಂಡಿರುವ ಕಾರಣವೇನು? | 1) ದಿನಾಂಕ:31.11.2017ರ ಮುಂಚಿತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ಸರ್ಕಾರದ ಆದೇಶದಂತೆ ಕನಿಷ್ಠ ವೇತನ ಪಾವತಿಸಲಾಗುತ್ತಿದೆ.<br>2) ಬಾಕಿ ಇರುವ ವೇತನ ವಿವರ ಲಗತ್ತಿಸಿದೆ.<br>3) ಸ್ವಂತ ಸಂಪನ್ಮೂಲ ಸಂಗ್ರಹಿಸಿ ವಿತರಿಸಲಾಗುವುದು. |

ತಮ್ಮ ವಿಶ್ವಾಸಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ರಾಮನಗರ ಜಿಲ್ಲಾ ಪಂಚಾಯತ್

# ಬಿಸ್ಕೂರು ಗ್ರಾಮ ಪಂಚಾಯಿತಿ ಸಿಬ್ಬಂದಿ ವೇತನ ಬಾಕಿ ವಿವರ

| ಕ್ರ. ಸಂ. | ಗ್ರಾ.ಪಂ. ಹೆಸರು | ಸಿಬ್ಬಂದಿ ಹೆಸರು | ಪದನಾಮ | ಬಾಕಿ ಇರುವ ವೇತನ ಮಾಹೆಗಳು |
|---|---|---|---|---|
| 1 | 2 | 3 | 4 | 5 |
| 1 | ಬಿಸ್ಕೂರು | ಕೆಂಪರಾಜು ಜಿ | ನೀರು ನಿರ್ವಾಹಕರು | 6 |
| 2 | | ಸತೀಶ್ ಎನ್. | ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ | 6 |
| 3 | | ರಮೇಶ | ನೀರು ನಿರ್ವಾಹಕರು | 8 |
| 4 | | ದಯಾನಂದ | ನೀರು ನಿರ್ವಾಹಕರು | 8 |
| 5 | | ಗಂಗಣ್ಣ | ನೀರು ನಿರ್ವಾಹಕರು | 5 |
| 6 | | ಸಿದ್ದಯ್ಯ | ನೀರು ನಿರ್ವಾಹಕರು | 10 |
| 7 | | ರಾಮು ಬಿ.ಜಿ. | ನೀರು ನಿರ್ವಾಹಕರು | 4 |
| 8 | | ಚೈತ್ರ ಬಿ.ಡಿ. | ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ | 10 |
| 9 | | ಕೆ ಮಲೇಶ | ಕರವಸೂಲಿಗಾರರು | 8 |
| 10 | | ರಾಜಣ್ಣ | ನೀರು ನಿರ್ವಾಹಕರು | 6 |
| 11 | | ನಾಗರಾಜು | ನೀರು ನಿರ್ವಾಹಕರು | 6 |
| 12 | | ಬಸವರಾಜು | ನೀರು ನಿರ್ವಾಹಕರು | 8 |
| 13 | | ನರಸಿಂಹಯ್ಯ | ನೀರು ನಿರ್ವಾಹಕರು | 8 |
| 14 | | ಕೆಂಪಹನುಮಯ್ಯ | ನೀರು ನಿರ್ವಾಹಕರು | 6 |
| 15 | | ಚಂದ್ರಪ್ಪ | ನೀರು ನಿರ್ವಾಹಕರು | 8 |
| 16 | | ವೆಂಕಟೇಶ್ | ನೀರು ನಿರ್ವಾಹಕರು | 4 |
| 17 | | ರಾಜಣ್ಣ | ನೀರು ನಿರ್ವಾಹಕರು | 8 |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ರಾಮನಗರ ಜಿಲ್ಲಾ ಪಂಚಾಯತ್